**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಶ್ರೀ ಎಸ್.ಎಲ್.ಭೋಜೇಗೌಡ ಹಾಗೂ ಶ್ರೀ ಮಧು ಜಿ ಮಾದೇಗೌಡ ಇವರುಗಳು ನಿಯಮ-330 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ**

ವೃತ್ತಿ ಶಿಕ್ಷಣ ಇಲಾಖೆಯಿಂದ(ಜೆ.ಓ.ಸಿ) ವಿವಿಧ ಇಲಾಖೆಗಳಲ್ಲಿ ಸಿಬ್ಬಂದಿಗಳ ಖಾಯಂಪೂರ್ವ ಸೇವೆಯನ್ನು ಪರಿಗಣಿಸಿ, ನಿಶ್ಚಿತ ಪಿಂಚಣಿ ನೀಡದೆ ಇರುವುದು, ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ ವೃತ್ತಿ ಶಿಕ್ಷಕರ ವೇತನ ತಾರತಮ್ಯ ಸರಿಪಡಿಸದೇ, ಬಡ್ತಿ ನೀಡದೇ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನಸೆಳೆಯಬಸುತ್ತೇನೆ.

**ಉತ್ತರ**

ಸರ್ಕಾರದ ಅಧಿಸೂಚನೆ ಸಂ:ವ್ಯಾ.ಶಾಇ ಶಾಸನ 22 2011 ಬೆಂಗಳೂರು ದಿನಾಂಕ:06.04.2011ರಲ್ಲಿ ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರುಗಳನ್ನು ವಿಲೀನಗೊಳಿಸುವುದಕ್ಕಾಗಿ ಶಾಸನವನ್ನು ದಿನಾಂಕ: 06.01.2011 ರಿಂದ ಜಾರಿಗೆ ತರಲಾಗಿದೆ

ಈ ಅಧಿನಿಯಮವನ್ನು [ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011] ಎಂದು ಕರೆಯಲಾಗಿದೆ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳನ್ನು ವಿಲೀನಗೊಳಿಸುವುದಕ್ಕಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಂಬಂಧ ಸರ್ಕಾರಿ ಅನುದಾನಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಎರಡು ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿದ್ದು ಅದರಂತೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಪರಿಶೀಲನಾ ಸಮಿತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಅಧ್ಯಕ್ಷತೆಯ ಪರಿಶೀಲನಾ ಸಮಿತಿಯು ಶಿಫಾರಸ್ಸಿನ ಅನ್ವಯ1668 ಅರೆಕಾಲಿಕ ನೌಕರರನ್ನು ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ವೃತ್ತಿ ಶಿಕ್ಷಕರ ವಿಶೇಷ ಶಿಕ್ಷಕರ ಹುದ್ದೆಗಳಿಗೆ ವಿಲೀನಗೊಳಿಸಲು ವೃತ್ತಿ ಶಿಕ್ಷಣ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಯಿತು.

**<u>ನಿಶ್ಚಿತ ಪಿಂಚಣಿ:-</u>**

"ಸರ್ಕಾರದ ಅಧಿಸೂಚನೆ ಸಂ:ವ್ಯಾ.ಶಾಇ ಶಾಸನ 22 2011 ಬೆಂಗಳೂರು ದಿನಾಂಕ:06.04.2011ರಲ್ಲಿ ಕ್ರ.ಸಂ 05 ರಲ್ಲಿ ತಿಳಿಸಿರುವಂತೆ ಈ ಅಧಿನಿಯಮದಡಿಯಲ್ಲಿ ವಿಲೀನಗೊಂಡ ಆತನ ಪ್ರಾರಂಭಿಕ ಮೂಲ ವೇತನವನ್ನು ಆತನು ವಿಲೀನಗೊಂಡ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗಧಿಗೊಳಿಸಲು ಹಾಗೂ ತನ್ನ ವಿಲೀನಕ್ಕೆ

15/3/24
R=330
SWa- 11

ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ, ರಜೆ ಹಾಗೂ ಪಿಂಚಣಿ ಸೌಲಭ್ಯಗಳಿಗೆ ಲೆಕ್ಕಕ್ಕೆ ತೆಗೆದುಕೊಳ್ಳುವಂತಿಲ್ಲ.

ಅದರಂತೆ ಪ್ರಸ್ತುತ ದಿನಾಂಕ:01.04.2006 ರ ನಂತರ ನೇಮಕಗೊಂಡ ಸರ್ಕಾರಿ/ಅನುದಾನಿತ ಶಾಲಾ ಸಿಬ್ಬಂದಿ/ನೌಕರರಿಗೆ ನೂತನ ಪಿಂಚಣಿ ಯೋಜನೆ ಅನ್ವಯವಾಗುವುದರಿಂದ, ಸದರಿ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರೆಕಾಲಿಕ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ ದಿನಾಂಕ:06.04.2011 ರಿಂದ ಜಾರಿಗೆ ಬಂದಿರುವುದರಿಂದ ಅಂದರೆ ನೂತನ ಪಿಂಚಣಿ ಯೋಜನೆ ಜಾರಿಗೆ ಬಂದ ದಿನಾಂಕ:01.04.2006ರ ನಂತರ ಬಂದಿರುವುದರಿಂದ ಮತ್ತು ಸದರಿ ಅರೆಕಾಲಿಕ ನೌಕರರು ಈ ಅಧಿನಿಯಮ ಜಾರಿಗೆ ಬಂದ ನಂತರ ಹುದ್ದೆಗಳಲ್ಲಿ ವಿಲೀನಗೊಂಡು ನೇಮಕಾತಿ ಸಕ್ರಮವಾಗಿರುವುದರಿಂದ ಇವರುಗಳಿಗೆ ನೂತನ ಪಿಂಚಣಿ ಯೋಜನೆ ಅನ್ವಯವಾಗುವುದರಿಂದ ಇವರುಗಳಿಗೆ ನಿಶ್ಚಿತ ಪಿಂಚಣಿ ಯೋಜನೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ವೇತನ ತಾರತಮ್ಯ:-

ಸರ್ಕಾರದ ಅದಿಸೂಚನೆ ಸಂ.ವ್ಯಾ.ಶಾಇ ಶಾಸನ 22 2011 ಬೆಂಗಳೂರು ದಿನಾಂಕ:06.04.2011 ರಲ್ಲಿ ಕ್ರ.ಸಂ: 05 ರಲ್ಲಿ ತಿಳಿಸಿರುವಂತೆ ಈ ಅಧಿನಿಯಮದಡಿಯಲ್ಲಿ ವಿಲೀನಗೊಂಡ ಆತನ ಪ್ರಾರಂಭಿಕ ಮೂಲ ವೇತನವನ್ನು ಆತನು ವಿಲೀನಗೊಂಡ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠಕ್ಕೆ ನಿಗಧಿಗೊಳಿಸಲು ಆದೇಶಿಸಲಾಗಿದೆ.

ಪರಂತು-ಖಾಸಗಿ ಅನುದಾನಿತ ಸಂಸ್ಥೆಗಳ ಅನುದಾನಿತ ಸಂಸ್ಥೆಗಳ ಸಂಬಂಧದಲ್ಲಿ ಹಾಗೇ ನೇಮಕಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರು ಅನುದಾನಿತ ಸಂಸ್ಥೆಗಳಲ್ಲಿನ ಅಂತಹುದೇ ಸೌಲಭ್ಯಗಳಿಗೆ ಅರ್ಹರಾಗಿರತಕ್ಕದ್ದು, ಎಂಬುದಾಗಿರುತ್ತದೆ.

ಸದರಿ ಅಧಿನಿಯಮದನ್ವಯ ಕಂಡಿಕೆ -5 ರಂತೆ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷ ಶಿಕ್ಷಕರ ಹುದ್ದೆ/ವೃತ್ತಿ ಶಿಕ್ಷಕರ ಹುದ್ದೆ/ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ ವಿಲೀನಗೊಳಿಸಲಾಗಿದೆ. ಈ ರೀತಿ ವಿಭಿನ್ನ ವೃಂದಗಳಲ್ಲಿ ವಿಲೀನಗೊಳಿಸಿರುವುದರಿಂದ ಆ ವೃಂದಗಳ ಕಾಲಿಕ ವೇತನ ಶ್ರೇಣಿಗಳು ಬೇರೆ ಬೇರೆಯಾಗಿದ್ದು ಈ ಕಾಲಿಕ ಶ್ರೇಣಿಗಳ ಕನಿಷ್ಠ ಹಂತಕ್ಕೆ ವೇತನ ನಿಗಧಿ ಗೊಳಿಸಿರುವುದರಿಂದ ವೇತನದಲ್ಲಿ ತಾರತಮ್ಯವಾಗಿರುತ್ತದೆ.

**ಸಂಖ್ಯೆ:ಇಪಿ 46 ಟಿವಿಇ 2023**

**(ಎಸ್.ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು